
ಚೈತ್ರಾ ಕೋಟೂರ್



ಚಿತ್ರಗಳು: ಸೃಜನ್

'ಪ್ರಿಯ ಕಣ್ಣುಗಳೇ, ನನ್ನಕ್ಷರಗಳನ್ನು ಕಾಣುತಿರುವ ನೀವು ಆಗಲೇ ನನ್ನವರಾಗಿದ್ದೀರಿ ಎಂದು ಭಾವಿಸುವೆ. ಅಲ್ಲೆಲ್ಲೋ ದೂರದಲ್ಲಿ ನಿಮ್ಮಂತರಾಳದಲ್ಲಿ, ರೆಪ್ಪೆ ಮುಚ್ಚಿಯೋ, ಅರೆ ರೆಪ್ಪೆ ತೆರೆದೋ, ಮಲಗಿರುವ ಅಥವಾ ಮಲಗಿದಂತೆ ನಟಿಸುತ್ತಿರುವ ನಿಮ್ಮ ಪ್ರೇಮದ ಕಂಗಳ ನನಗಾಗಿ ತೆರೆಯಿರಿ. ವಯಸ್ಸು, ಭಾಷೆ, ಜಾತಿ, ಅಂತಸ್ತು, ವೃತ್ತಿ, ವಿವಾಹಿತ, ಅವಿವಾಹಿತ, ಸುಂದರ, ಕುರೂಪ ಯಾವುದರ ಪರಿವೆಯೂ ಎನಗಿಲ್ಲ. ಏನಾದರೂ ಸರಿ, ಹೇಗಾದರೂ ಸರಿ ನೀವು ನನ್ನವರೇ (ನಿಮಗೂ ಅನಿಸಿದ್ದಲ್ಲಿ ಮಾತ್ರ).

ಈ ಪ್ರಪಂಚದ ಎಲ್ಲಾ ಕಂಗಳಲ್ಲಿ ಸ್ವಚ್ಛಂದವಾಗಿ ಬಾನಲಿ ಬೆಳಗುವ ಸೂರ್ಯನಂತಹ ಪ್ರೇಮ ಜ್ಯೋತಿಯನ್ನು ಹುಡುಕಿ ಹುಡುಕಿ ಸೋತಿದ್ದೇನೆ. ಸೋತಷ್ಟು ಹುಡುಕಾಟ ಪುಟಿಯುತ್ತಿರುವುದ ನೋಡಿದರೆ ನಿಮ್ಮದೇ ಸೆಳೆತವೆನಿಸುತ್ತದೆ. ನೀವು ನನಗಾಗಿಯೇ ಇರುವಿರೆನಿಸಿ, ನಿಮಗಾಗಿಯೇ ಬರೆಯುತ್ತಿದ್ದೇನೆ. ನಿಮಗಾಗಿ ನಾನು, ನನಗಾಗಿ ನೀವು ಇದ್ದರೂ ಇರಬಹುದಲ್ಲವೇ? ಅದಕ್ಕೆ ಸಾಕ್ಷಿಯೆಂಬಂತೆ ನನ್ನೀ ಮನದಾಳಗಳ ನೀವೀಗ ಓದುತ್ತಿರಬಹುದಲ್ಲವೇ? ಕಗ್ಗತ್ತಲ ಕಾಡ್ಗಿಚ್ಚಿನಲ್ಲಿ ನಿಮ್ಮನರಸಿ ಬಸವಳಿದಿದ್ದೇನೆ. ಇನ್ನೆಷ್ಟು ದಿನ ಹೀಗೆಯೇ? ಅನಿಸುತ್ತಿಲ್ಲವೇ ನಿಮಗೆ ಒಮ್ಮೆ ನನ್ನೊಳು